**ಕರ್ನಾಟಕ ಸರ್ಕಾರ**

**(ಕೃಷಿ ಇಲಾಖೆ)**

ಸಂಖ್ಯೆ: ರಗೊವಿ(ರಗೊ&ಸಾಗೊ)/ವಿ.ಪ/506/2024-25 ಕೃಷಿ ಆಯುಕ್ತರ ಕಾರ್ಯಾಲಯ,

[Click here to download Annexure](#)

[illegible]ಸ್ತೆ, ಬೆಂಗಳೂರು-01

ದಿನಾಂಕ: 14.08.2024

ಇವರಿಗೆ,

ಸರ್ಕಾರದ ಕಾರ್ಯದರ್ಶಿಗಳು,
ಕೃಷಿ ಇಲಾಖೆ,
ಬಹುಮಹಡಿಗಳ ಕಟ್ಟಡ, ಬೆಂಗಳೂರು

ಮಾನ್ಯರೇ,

ವಿಷಯ: ವಿಧಾನ ಪರಿಷತ್ತಿನ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 506 ಕ್ಕೆ ಮಾಹಿತಿಯನ್ನು ಸಲ್ಲಿಸುವ ಕುರಿತು.

ಉಲ್ಲೇಖ:
1. ಕಾರ್ಯದರ್ಶಿಗಳು ಕರ್ನಾಟಕ ವಿಧಾನ ಪರಿಷತ್ತು ರವರ ಪತ್ರ ಸಂಖ್ಯೆ: ಎಲ್‌ಸಿಕ್ಯೂ /506/153ನೇಅ/2024 ದಿನಾಂಕ 10-07-2024.
2. ಈ ಕಛೇರಿ ಪತ್ರ ಸಂ:ರಗೊವಿ(ರಗೊ&ಸಾಗೊ)/ವಿ/ಪ/506/2024-25 ದಿನಾಂಕ 18.07.2024

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಸುನೀಲ್ ವಲ್ಯಾಪುರ್(ವಿಧಾನ ಸಭೆಯಿಂದ ಚುನಾಯಿತರಾದವರು) ರವರು ಕೇಳಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 506 ಕ್ಕೆ ಸಂಬಂಧಿಸಿದಂತೆ ಕಂಡಿಕೆ(ಉ) ಮತ್ತು (ಊ), ಗೆ ಸಂಬಂಧಪಟ್ಟಂತೆ ಕೇಂದ್ರ ಪುರಸ್ಕೃತ ಯೋಜನೆಗಳಾದ ಆಹಾರ & ಪೌಷ್ಟಿಕ ಭದ್ರತೆ ಹಾಗೂ ರಾಷ್ಟ್ರೀಯ ಖಾದ್ಯ ತೈಲ ಅಭಿಯಾನ ಯೋಜನೆಗಳ ಫಲಾನುಭವಿಗಳ ವಿವರಗಳು ಹೆಚ್ಚಿನ ಸಂಖ್ಯೆಯಲ್ಲಿದ್ದು, ಜಿಲ್ಲೆಗಳಿಂದ ಕ್ರೋಢೀಕರಿಸಿ ಸಲ್ಲಿಸಲು ಉಲ್ಲೇಖ-2ರ ಪತ್ರದನ್ವಯ ಕಾಲಾವಕಾಶವನ್ನು ಕೋರಲಾಗಿತ್ತು.

ಪ್ರಸ್ತುತ ಜಿಲ್ಲೆಗಳಿಂದ ಮಾಹಿತಿಯನ್ನು ಕ್ರೋಢೀಕರಿಸಿ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಸುನೀಲ್ ವಲ್ಯಾಪುರ್(ವಿಧಾನ ಸಭೆಯಿಂದ ಚುನಾಯಿತರಾದವರು) ರವರು ಕೇಳಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 506 ಕ್ಕೆ ಉತ್ತರವನ್ನು ಸಿದ್ಧಪಡಿಸಿ ಈ ಪತ್ರದೊಂದಿಗೆ ಲಗತ್ತಿಸಿ ಸಲ್ಲಿಸಿದೆ.

ಲಗತ್ತು: ಪ್ರಶ್ನೆ ಸಂಖ್ಯೆ 506 ರ ಉತ್ತರದ ಪ್ರತಿ.

ತಮ್ಮ ವಿಶ್ವಾಸಿ,

**ಕೃಷಿ ನಿರ್ದೇಶಕರು**

ಕರ್ನಾಟಕ ವಿಧಾನ ಪರಿಷತ್ತು
ಚುಕ್ಕೆ ಗುರುತಿಲ್ಲದ ಪ್ರಶ್ನೆ

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 506 |
| ಪ್ರಶ್ನೆ ಕೇಳಿರುವವರು: | ಶ್ರೀ ಸುನೀಲ್ ವಲ್ಯಾಪುರ್(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ: | 19.07.2024 |
| ಉತ್ತರಿಸಬೇಕಾದವರು: | ಮಾನ್ಯ ಕೃಷಿ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಒಂದು ವರ್ಷಕ್ಕೆ ಬೇಕಾಗುವ ಯೂರಿಯಾ ಗೊಬ್ಬರದ ಬೇಡಿಕೆ ಎಷ್ಟು; ಪ್ರಸಕ್ತ ವರ್ಷ ಬೇಡಿಕೆಯಂತೆ ಅಗತ್ಯ ಪ್ರಮಾಣದ ಯೂರಿಯಾ ಗೊಬ್ಬರ ರಾಜ್ಯಕ್ಕೆ ಪೂರೈಕೆ ಆಗಿದೆಯೇ; ಯಾವ ಯಾವ ಜಿಲ್ಲೆಗಳಿಗೆ ಎಷ್ಟು ಪ್ರಮಾಣದ ಗೊಬ್ಬರ ಸರಬರಾಜು ಮಾಡಲಾಗಿದೆ (ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು) | ರಾಜ್ಯದಲ್ಲಿ ಮುಂಗಾರು, ಹಿಂಗಾರು/ಬೇಸಿಗೆ ಹಂಗಾಮಿನ ಯೂರಿಯಾ ರಸಗೊಬ್ಬರದ ಬೇಡಿಕೆ ಸುಮಾರು 16.00 ಲಕ್ಷ ಮೆ. ಟನ್ ಪ್ರಮಾಣ ಇರುತ್ತದೆ.<br>2024ನೇ ಸಾಲಿನ ಮುಂಗಾರು ಹಂಗಾಮಿಗೆ ರಾಜ್ಯದ ಯೂರಿಯಾ ರಸಗೊಬ್ಬರದ ಬೇಡಿಕೆ 10.75 ಲಕ್ಷ ಮೆ.ಟನ್ ಇರುತ್ತದೆ. ಅದಕ್ಕನುಗುಣವಾಗಿ ದಿನಾಂಕ 14.08.2024ರಂತೆ ಒಟ್ಟು 12.65 ಲಕ್ಷ ಮೆ.ಟನ್ ಯೂರಿಯಾ ರಸಗೊಬ್ಬರ ಸರಬರಾಜಾಗಿರುತ್ತದೆ. (ಆರಂಭಿಕ ಶಿಲ್ಕು 5.40 ಲಕ್ಷ ಮೆ.ಟನ್ ಒಳಗೊಂಡಂತೆ) ಸರಬರಾಜು ಪ್ರಕ್ರಿಯೆ ಜಾರಿಯಲ್ಲಿದ್ದು, 4.66 ಲಕ್ಷ ಮೆ.ಟನ್ ಪ್ರಮಾಣದ ಯೂರಿಯಾ ರಸಗೊಬ್ಬರದ ದಾಸ್ತಾನಿದ್ದು, ಯಾವುದೇ ಕೊರತೆ ಇರುವುದಿಲ್ಲ.<br>2024ನೇ ಸಾಲಿನ ಮುಂಗಾರು ಹಂಗಾಮಿಗೆ ಜಿಲ್ಲೆಗಳಿಗೆ ಸರಬರಾಜಾಗಿರುವ ಯೂರಿಯಾ ರಸಗೊಬ್ಬರದ ವಿವರವನ್ನು ಅನುಬಂಧ-1 ರಲ್ಲಿ ನೀಡಲಾಗಿದೆ. |
| ಆ) | ಪ್ರಸಕ್ತ ವರ್ಷದ ಮುಂಗಾರು ಹಂಗಾಮಿನಲ್ಲಿ ಬಿತ್ತನೆ ಬೀಜ ಅಗತ್ಯ ಪ್ರಮಾಣದಲ್ಲಿ ಸರಬರಾಜು ಆಗಿದೆಯೇ; ಉತ್ತರ ಕರ್ನಾಟಕ ಹಾಗೂ ಕಲ್ಯಾಣ ಕರ್ನಾಟಕ ಭಾಗದಲ್ಲಿ ಹೆಚ್ಚಾಗಿ ಬೆಳೆಯುವ ಹತ್ತಿ ಬೀಜ ಮಾರಾಟಗಾರರು ಕೃತಕ ಅಭಾವ ಸೃಷ್ಟಿಸಿ ಸರ್ಕಾರ ನಿಗದಿಪಡಿಸಿರುವ ಬೆಲೆಗಿಂತ ಎರಡು | 2024ರ ಮುಂಗಾರು ಹಂಗಾಮಿನಲ್ಲಿ ರಾಜ್ಯ ಸರ್ಕಾರದ ಬೀಜಗಳ ಪೂರೈಕೆ ಯೋಜನೆಯಡಿ 5.52 ಲಕ್ಷ ಕ್ವಿಂಟಾಲ್ ಬಿತ್ತನೆ ಬೀಜಗಳ ಬೇಡಿಕೆಗೆ 9.01 ಲಕ್ಷ ಕ್ವಿಂಟಾಲ್ ಬಿತ್ತನೆ ಬೀಜಗಳು ಲಭ್ಯವಿದ್ದು, ರಾಜ್ಯಾದ್ಯಂತ ಕೃಷಿ ಇಲಾಖೆಯ ರೈತ ಸಂಪರ್ಕ ಕೇಂದ್ರಗಳು, ಹೆಚ್ಚುವರಿ ಮಾರಾಟ ಕೇಂದ್ರಗಳು ಹಾಗೂ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಮೂಲಕ ಅಗತ್ಯ ಪ್ರಮಾಣದಲ್ಲಿ ಸಮರ್ಪಕವಾಗಿ |

| | | |
|---|---|---|
| | ಮೂರು ಪಟ್ಟು ಪಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಅಂತವರ ವಿರುದ್ಧ ಸರ್ಕಾರ ಯಾವ ಕ್ರಮ ಕೈಗೊಳ್ಳುವುದು; (ಮಾಹಿತಿ ನೀಡುವುದು) | ಬಿತ್ತನೆ ಬೀಜಗಳನ್ನು ವಿತರಣೆ ಮಾಡಲಾಗಿರುತ್ತದೆ. ದಿನಾಂಕ: 14.08.2024 ರವರೆಗೆ 3,71,862 ಕ್ವಿಂಟಾಲ್ ಗಳಷ್ಟು ಬಿತ್ತನೆ ಬೀಜಗಳನ್ನು ವಿತರಣೆ ಮಾಡಲಾಗಿದ್ದು, 66,011 ಕ್ವಿಂಟಾಲ್ ಗಳಷ್ಟು ದಾಸ್ತಾನು ಇರುತ್ತದೆ. ಉಳಿದ ಪ್ರಮಾಣ ಸಂಬಂಧಿಸಿದ ಸಂಸ್ಥೆಗಳಲ್ಲಿ ಲಭ್ಯವಿರುತ್ತದೆ. ಬಿತ್ತನೆ ಬೀಜ ವಿತರಣೆ ಕಾರ್ಯ ಪ್ರಗತಿಯಲ್ಲಿದೆ.<br>ರಾಜ್ಯದಲ್ಲಿ ಹತ್ತಿ ಬೀಜ ಮಾರಾಟಗಾರರು ಕೇಂದ್ರ ಸರ್ಕಾರ ನಿಗದಿಪಡಿಸಿರುವ ಬೆಲೆಗಿಂತ ಹೆಚ್ಚು ಬೆಲೆಗೆ ಮಾರಾಟ ಮಾಡಿರುವ ಒಟ್ಟು 11 ಪ್ರಕರಣಗಳು ವರದಿ ಆಗಿರುತ್ತವೆ. ವಿವರಗಳನ್ನು ಕೆಳಗಿನಂತೆ ನೀಡಲಾಗಿದ್ದು, ಸದರಿ ಮಾರಾಟಗಾರರ ಪರವಾನಗಿಯನ್ನು ಅಮಾನತ್ತುಗೊಳಿಸಲಾಗಿದೆ.<br>ಯಾದಗಿರಿ ಜಿಲ್ಲೆ:<br>1. ರಾಕೇಶ್ ಪಾಟೀಲ್ ಅಗ್ರೋ ಕೇಂದ್ರ, ಶಹಾಪೂರ ತಾಲ್ಲೂಕು,<br>2. ಅನ್ನದಾತ ಕ್ರಾಪ್ ಕೇರ್, ಶಹಾಪೂರ ತಾಲ್ಲೂಕು,<br>ರಾಯಚೂರು ಜಿಲ್ಲೆ<br>1. ವಿಜಯಲಕ್ಷ್ಮೀ ಟ್ರೇಡರ್ಸ್, ದೇವದುರ್ಗ ತಾಲ್ಲೂಕು.<br>2. ಎಸ್.ಎಮ್.ಆಗ್ರೋ ಏಜೆನ್ಸೀಸ್, ದೇವದುರ್ಗ ತಾಲ್ಲೂಕು.<br>ಕಲಬುರಗಿ ಜಿಲ್ಲೆ<br>1. ಶ್ರೀ ಸಾಯಿ ಟ್ರೇಡರ್ಸ್, ಜೇವರ್ಗಿ ತಾಲ್ಲೂಕು.<br>2. ಸೌದಾಗರ್ ಟ್ರೇಡರ್ಸ್, ಸೊನ್ನ, ಜೇವರ್ಗಿ ತಾಲ್ಲೂಕು<br>3. ಮೆ.ನೀಲಾ ಎಂಟರ್‌ಪ್ರೈಸಸ್, ಕಲಬುರಗಿ ತಾಲ್ಲೂಕು<br>4. ಗೋಲ್ಲಾಳೇಶ್ವರ ಅಗ್ರೋ ಏಜೆನ್ಸೀಸ್, ಅಫಜಲಪುರ ತಾಲ್ಲೂಕು.<br>5. ಶ್ರೀ ಭಾಗ್ಯವಂತಿ ಅಗ್ರೋ ಏಜೆನ್ಸೀಸ್, ಯೆಡ್ರಾಮಿ ತಾಲ್ಲೂಕು.<br>6. ಶ್ರೀ ರೇವಣ್ಣ ಸಿದ್ದೇಶ್ವರ ಅಗ್ರೋ ಕೇಂದ್ರ, ಸೊನ್ನ, ಜೇವರ್ಗಿ ತಾಲ್ಲೂಕು.<br>7. ಮೆ. ಓಂಪ್ರಕಾಶ್ ಶ್ರೀನಿವಾಸ್, ಕಲಬುರಗಿ ತಾಲ್ಲೂಕು. |

| | | |
|---|---|---|
| ಇ) | ಕೃಷಿ ಇಲಾಖೆಯ ವಿವಿಧ ಯೋಜನೆಗಳೂ ಯಾವುವು; ಕಳೆದ ಮೂರು ವರ್ಷಗಳಿಂದ ಈ ಯೋಜನೆಗಳಿಗೆ ಬಿಡುಗಡೆಯಾದ ಅನುದಾನವೆಷ್ಟು; (ಜಿಲ್ಲಾವಾರು, ಯೋಜನಾವಾರು ಮಾಹಿತಿ ನೀಡುವುದು) | ಕೃಷಿ ಇಲಾಖೆಯ ವಿವಿಧ ಯೋಜನೆಗಳು ಹಾಗೂ ಕಳೆದ ಮೂರು ವರ್ಷಗಳಿಂದ ಈ ಯೋಜನೆಗಳಿಗೆ ಬಿಡುಗಡೆಯಾದ ಅನುದಾನದ ಜಿಲ್ಲಾವಾರು ಮತ್ತು ಯೋಜನೆವಾರು ಮಾಹಿತಿಯನ್ನು ಪೆನ್ ಡ್ರೈವ್ ನಲ್ಲಿ (ಅನುಬಂಧ-2)ನೀಡಲಾಗಿದೆ. |
| ಈ) | ರೈತರಿಗೆ ನೀಡುತ್ತಿರುವ ಕೃಷಿ ಉಪಕರಣಗಳನ್ನು ಯಾವ ಮಾನದಂಡದ ಮೇಲೆ ಮತ್ತು ಯಾವ ಸಂಸ್ಥೆಯಿಂದ ಖರೀದಿ ಮಾಡಲಾಗಿದೆ; ಈ ಉಪಕರಣಗಳಿಗೆ ಸರ್ಕಾರದಿಂದ ಸಬ್ಸಿಡಿ ನೀಡಲಾಗಿದೆಯೇ; ನೀಡಿದ್ದಲ್ಲಿ ಅದರ ಪ್ರಮಾಣ ಎಷ್ಟು; (ಕಳೆದ ಮೂರು ವರ್ಷಗಳ ಮಾಹಿತಿ ನೀಡುವುದು) | 1. ಕೃಷಿ ಇಲಾಖೆಯಲ್ಲಿ ಯಾವುದೇ ಸಂಸ್ಥೆಯಿಂದ ಉಪಕರಣಗಳನ್ನು ಖರೀದಿ ಮಾಡಲಾಗುತ್ತಿಲ್ಲ. ಆದರೆ, ಪರೀಕ್ಷಾ ವರದಿಗಳನ್ನು ಹೊಂದಿದ ಎಂಪ್ಯಾನೆಲ್‌ಗೊಂಡ ಸರಬರಾಜು ಸಂಸ್ಥೆಗಳಿಂದ ಕೃಷಿ ಉಪಕರಣಗಳನ್ನು ಪಡೆದ ರೈತರಿಗೆ ಸಹಾಯಧನವನ್ನು ಒದಗಿಸಲಾಗುತ್ತಿದೆ.<br>2. ಸರಬರಾಜು ಸಂಸ್ಥೆಗಳನ್ನು ಈ ಕೆಳಕಂಡ ಮಾನದಂಡಗಳ ಮೇಲೆ ಎಂಪ್ಯಾನೆಲ್‌ಗೊಳಿಸಿ ಸಹಾಯಧನವನ್ನು ನೀಡಲಾಗುತ್ತದೆ.<br>i. ಕೇಂದ್ರ ಸರ್ಕಾರದಿಂದ ಅನುಮೋದಿತ ಸಂಸ್ಥೆಗಳಿಂದ ಪರೀಕ್ಷಾ ವರದಿಗಳನ್ನು ಹೊಂದಿರುವ ಸರಬರಾಜು ಸಂಸ್ಥೆಗಳ ಮಾದರಿಗಳನ್ನು ಎಂಪ್ಯಾನೆಲ್‌ಗೊಳಿಸಲಾಗುವುದು.<br>ii. ಎಂಪ್ಯಾನೆಲ್ ಗೊಂಡ ಮಾದರಿಗಳ ಸಂಸ್ಥೆಗಳಲ್ಲಿ ಕನಿಷ್ಠ ದರದ ಆಧಾರದ ಮೇಲೆ ಸಾಮಾನ್ಯ ವರ್ಗದ ರೈತರಿಗೆ ಶೇ.50 ಹಾಗೂ ಪ.ಜಾ./ಪ.ಪಂ. ವರ್ಗದ ರೈತರಿಗೆ ಶೇ.90 ರಷ್ಟು ಗರಿಷ್ಠ ರೂ.1.00 ಲಕ್ಷ ಸಹಾಯಧನವನ್ನು ಒದಗಿಸಲಾಗುವುದು.<br>iii. ಜೇಷ್ಠತೆಯ ಆಧಾರದ ಮೇಲೆ ರೈತರಿಗೆ ಆಯ್ಕೆ ಮಾಡಿ ಕೃಷಿ ಉಪಕರಣಗಳನ್ನು ಪಡೆದ ನಂತರ ಸಹಾಯಧನವನ್ನು ಒದಗಿಸಲಾಗುವುದು.<br>iv. ಒಮ್ಮೆ ಪಡೆದ ರೈತರಿಗೆ ಮುಂದಿನ ಏಳು ವರ್ಷಗಳಿಗೆ ಸದರಿ ಉಪಕರಣವನ್ನು ಪಡೆಯಲು ಅವಕಾಶವಿರುವುದಿಲ್ಲ.<br>3. ಕಳೆದ ಮೂರು ವರ್ಷಗಳಲ್ಲಿ ಕೃಷಿ ಯಾಂತ್ರೀಕರಣ ಯೋಜನೆಯಡಿ ಸಬ್ಸಿಡಿ ನೀಡಲಾಗಿದ್ದು, ವಿವರ ಈ ಕೆಳಕಂಡಂತಿದೆ:<br><br>ಕ್ರ.ಸಂ. \| ವರ್ಷ \| ನೀಡಲಾದ ಸಬ್ಸಿಡಿ (ರೂ.ಲಕ್ಷಗಳಲ್ಲಿ)<br>1. \| 2021-22 \| 42569.50<br>2. \| 2022-23 \| 25130.64<br>3. \| 2023-24 \| 38671.25<br><br>4. ಮಾದರಿವಾರು ಕನಿಷ್ಠ ದರದ ಆಧಾರದ ಮೇಲೆ ಸಾಮಾನ್ಯ ವರ್ಗದ ರೈತರಿಗೆ ಶೇ.50 |

| | | |
|---|---|---|
| | | ಹಾಗೂ ಪ.ಜಾ./ಪ.ಪಂ. ವರ್ಗದ ರೈತರಿಗೆ ಶೇ.90 ರಷ್ಟು ಗರಿಷ್ಠ ರೂ.1.00 ಲಕ್ಷ ಸಹಾಯಧನವನ್ನು ಒದಗಿಸಲಾಗುವುದು. |
| ಉ) | ಕೇಂದ್ರ ಸರ್ಕಾರದ ಪುರಸ್ಕೃತ ಕೃಷಿ ಯೋಜನೆಗಳು ಯಾವುವು? ಹಾಗೂ ಪಡೆದುಕೊಂಡ ಫಲಾನುಭವಿಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | 2023-24ನೇ ಸಾಲಿನಲ್ಲಿ ಕೇಂದ್ರ ಸರ್ಕಾರದ ಪುರಸ್ಕೃತ ಕೃಷಿ ಯೋಜನೆಗಳು ಹಾಗೂ ಸದರಿ ಯೋಜನೆಗಳಡಿ ಸೌಲಭ್ಯ ಪಡೆದುಕೊಂಡ ಫಲಾನುಭವಿಗಳ ಸಂಖ್ಯೆಯ ಜಿಲ್ಲಾವಾರು ಮಾಹಿತಿಯನ್ನು ಪೆನ್ ಡ್ರೈವ್ ನಲ್ಲಿ (ಅನುಬಂಧ-2) ನೀಡಲಾಗಿದೆ. |
| ಊ) | ರಾಜ್ಯ ಸರ್ಕಾರ ಪುರಸ್ಕೃತ ಮತ್ತು ಕೇಂದ್ರ ಸರ್ಕಾರ ಪುರಸ್ಕೃತ ಜಂಟಿಯಾಗಿ ನಡೆಸುವ ಯೋಜನೆಗಳು ಯಾವುವು? (ಫಲಾನುಭವಿಗಳ ಹೆಸರು ನೀಡುವುದು) | 2023-24ನೇ ಸಾಲಿನಲ್ಲಿ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ಜಂಟಿಯಾಗಿ ನಡೆಸುವ ಯೋಜನೆಗಳು ಹಾಗೂ ಸದರಿ ಯೋಜನೆಗಳಡಿ ಫಲಾನುಭವಿಗಳ ಹೆಸರುಗಳನ್ನು ಪೆನ್ ಡ್ರೈವ್ ನಲ್ಲಿ (ಅನುಬಂಧ-2) ಮತ್ತು ಸಿಡಿ ರೂಪದಲ್ಲಿ(ಅನುಬಂಧ-3) ನೀಡಲಾಗಿದೆ. |

ಅಡಕಗಳು: ಅನುಬಂಧ-1
ಪೆನ್‌ಡ್ರೈವ್-1
ಸಿ.ಡಿ-1

ಕೃಷಿ ನಿರ್ದೇಶಕರು

ಅನುಬಂಧ-1- ಎಲ್.ಸಿ.ಕ್ಯೂ-506

2024 ನೇ ಸಾಲಿನ ಮುಂಗಾರು ಹಂಗಾಮಿಗೆ ರಾಜ್ಯದ ಯೂರಿಯಾ ರಸಗೊಬ್ಬರ ಬೇಡಿಕೆ ಮತ್ತು ಸರಬರಾಜು ವಿವರ(ಮೆ.ಟನ್ ಗಳಲ್ಲಿ)

| 1 | 2 | 3 | 4 | 5 | 6 |
|---|---|---|---|---|---|
| ಕ್ರ. ಸಂ. | ಜಿಲ್ಲೆಗಳು | ಏಪ್ರಿಲ್-2024ರಿಂದ ಸೆಪ್ಟೆಂಬರ್-2024ರ ಮಾಹೆಯವರೆಗಿನ ಬೇಡಿಕೆ | ಏಪ್ರಿಲ್ ರಿಂದ ಆಗಸ್ಟ್ 2024 ರ ಮಾಹೆಯವರೆಗಿನ ಬೇಡಿಕೆ | ಒಟ್ಟು ಸರಬರಾಜು (ದಿನಾಂಕ 14.08.2024ರಂತೆ) (ಆರಂಭಿಕ ಶಿಲ್ಕು ಒಳಗೊಂಡಿದೆ) | *ಉಳಿಕೆ ದಾಸ್ತಾನು ಪ್ರಮಾಣ 14.08.2024 ರಂತೆ |
| 1 | ಬಾಗಲಕೋಟೆ | 52633 | 42602 | 63422 | 26455 |
| 2 | ಬೆಂಗಳೂರು ಗ್ರಾಮಾಂತರ | 11562 | 9358 | 10219 | 2581 |
| 3 | ಬೆಳಗಾಂ | 115557 | 93533 | 162640 | 53804 |
| 4 | ಬಳ್ಳಾರಿ | 46128 | 37336 | 59696 | 23001 |
| 5 | ಬೆಂಗಳೂರು ನಗರ | 5729 | 4637 | 11238 | 3696 |
| 6 | ಬೀದರ್ | 13900 | 11251 | 18843 | 6974 |
| 7 | ಬಿಜಾಪುರ | 47069 | 38098 | 78701 | 40383 |
| 8 | ಚಾಮರಾಜನಗರ | 17507 | 14170 | 13789 | 4112 |
| 9 | ಚಿಕ್ಕಬಳ್ಳಾಪುರ | 15123 | 12241 | 14052 | 2793 |
| 10 | ಚಿಕ್ಕಮಗಳೂರು | 32137 | 26012 | 33520 | 10817 |
| 11 | ಚಿತ್ರದುರ್ಗ | 24388 | 19740 | 28342 | 4521 |
| 12 | ದಕ್ಷಿಣ ಕನ್ನಡ | 4157 | 3365 | 4021 | 2315 |
| 13 | ದಾವಣಗೆರೆ | 53238 | 43091 | 57150 | 22087 |
| 14 | ಧಾರವಾಡ | 27562 | 22309 | 32725 | 9052 |
| 15 | ಗದಗ | 27497 | 22256 | 30152 | 4673 |
| 16 | ಕಲ್ಬುರ್ಗಿ | 32496 | 26303 | 43839 | 19834 |
| 17 | ಹಾಸನ | 50301 | 40714 | 59254 | 22594 |
| 18 | ಹಾವೇರಿ | 66079 | 53485 | 79101 | 13821 |
| 19 | ಕೊಡಗು | 19366 | 15675 | 18860 | 8896 |
| 20 | ಕೋಲಾರ | 13690 | 11081 | 11648 | 2466 |
| 21 | ಕೊಪ್ಪಳ | 50274 | 40692 | 50624 | 22282 |
| 22 | ಮಂಡ್ಯ | 41979 | 33978 | 43363 | 17811 |
| 23 | ಮೈಸೂರು | 35551 | 28775 | 42314 | 20838 |
| 24 | ರಾಯಚೂರು | 81599 | 66047 | 92123 | 43166 |
| 25 | ರಾಮನಗರ | 18555 | 15019 | 13477 | 4918 |
| 26 | ಶಿವಮೊಗ್ಗ | 30131 | 24388 | 35767 | 14638 |
| 27 | ತುಮಕೂರು | 31860 | 25788 | 35385 | 15082 |
| 28 | ಉಡುಪಿ | 3500 | 2833 | 2933 | 1337 |
| 29 | ಉತ್ತರ ಕನ್ನಡ | 15930 | 12894 | 24242 | 8567 |
| 30 | ವಿಜಯನಗರ | 40391 | 32693 | 39235 | 8988 |
| 31 | ಯಾದಗಿರಿ | 49111 | 39749 | 55299 | 23798 |
| | ಒಟ್ಟು | **1075000** | **870113** | **1265976** | **466300** |